ಇ) ಪುನರ್ವಸತಿ ಮತ್ತು ಪುನಶ್ಚೇತನ ಕಾರ್ಯಕ್ರಮದ ಅನುಷ್ಠಾನದ ಬಗ್ಗೆ ವಿಶ್ವ ಬ್ಯಾಂಕ್‌ನವರು ಹಾಕಿದ್ದ ನಿಬಂಧನೆಗಳನ್ನು ಒಪ್ಪಿಕೊಳ್ಳಲಾಗಿದೆ.

ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು

ಶ್ರೀ ಹಾರ್ನಳ್ಳಿ ರಾಮಸ್ವಾಮಿ (ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಸಚಿವರು):– ಮಾನ್ಯ ಅಧ್ಯಕ್ಷರೆ, ದಿನಾಂಕ: 15.3.93ರ ಲಿಖಿತ ಮೂಲಕ ಉತ್ತರಿಸುವ 19ನೇ ಪಟ್ಟಿಯಲ್ಲಿರುವ 61 ಪ್ರಶ್ನೆಗಳ ಪೈಕಿ ಪ್ರಶ್ನೆಗಳ ಸಂಖ್ಯೆ: 1767, 1766, 1390, 1392, 1773, 2034, 2036, 842, 1101, 1508, 2074, 1103, 1976, 144, 809, 1963, 682, 384, 538, 393 ಪ್ರಶ್ನೆಗಳನ್ನು ಹೊರತುಪಡಿಸಿ ಇನ್ನು ಉಳಿದ 41 ಚುಕ್ಕೆ ಗುರುತಿಲ್ಲದ ಪ್ರಶ್ನೆಗಳ ಉತ್ತರವನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ವಿ. ಸಿ. ನಾಲಾ ಆಧುನೀಕರಣ ಹಾಗೂ ಮಂದಗೆರೆ ಎಡದಂಡೆ ಮತ್ತು ಬಲದಂಡೆ ನಾಲಾ ಅಭಿವೃದ್ಧಿ

1165 (2039): ಶ್ರೀ ಎಂ.ಎಸ್. ಆತ್ಮಾನಂದ (ಮಂಡ್ಯ):–

ಮಾನ್ಯ ಉಪಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ವಿ. ಸಿ. ನಾಲಾ ಆಧುನೀಕರಣ ಕೆಲಸವನ್ನು ಕೈಗೊಳ್ಳಲಾಗಿದೆಯೇ ?

ಆ) ಹಾಗಿದ್ದಲ್ಲಿ, ಈ ಆಧುನೀಕರಣದ ಯೋಜನೆಯ ವಿವರಗಳೇನು ?

ಇ) ಹೇಮಾವತಿ ಯೋಜನೆಯಡಿಯಲ್ಲಿನ ಮಂದಗೆರೆ ಎಡದಂಡೆ ಹಾಗೂ ಬಲದಂಡೆ ನಾಲೆಗಳು ಶಿಥಿಲವಾಗಿರುವುದು ಸರ್ಕಾರವು ಮನಗಂಡಿದೆಯೆ ?

ಈ) ಹಾಗಿದ್ದಲ್ಲಿ, ಈ ನಾಲೆಗಳನ್ನು ಅಭಿವೃದ್ಧಿಪಡಿಸಲು ಸರ್ಕಾರದವರು ಕೈಗೊಂಡಿರುವ ಕ್ರಮವೇನು ?

ಉ) ಹೇಮಾವತಿ ಯೋಜನೆಗೆ ಈವರೆಗೆ ಸರ್ಕಾರವು ಎಷ್ಟು ಹಣವನ್ನು ಖರ್ಚು ಮಾಡಿದೆ ?

ಶ್ರೀ ಎಸ್. ಎಂ. ಕೃಷ್ಣ (ಉಪಮುಖ್ಯಮಂತ್ರಿಗಳು):–

ಅ) ಹೌದು.

ಆ) ವಿಶ್ವೇಶ್ವರಯ್ಯ ನಾಲೆಯ 37ನೇ ಕಿ.ಮೀ.ವರೆಗೆ ಎರಡೂ ಪಾರ್ಶ್ವಗಳ ಒಡ್ಡುಗಳನ್ನು ಎತ್ತರಿಸುವುದು ಮತ್ತು ಬಲಪಡಿಸುವುದು, ಸದರಿ ನಾಲೆಯ 37ನೇ ಕಿ.ಮೀ.ವರೆಗಿನ ವ್ಯಾಪ್ತಿಯಲ್ಲಿ ಬರುವ 8 ಅಡ್ಡ ಚರಂಡಿಗಳು ಮತ್ತು 29 ಸೇತುವೆಗಳನ್ನು ನವೀಕರಿಸುವುದು, ವಿಶ್ವೇಶ್ವರಯ್ಯ ನಾಲೆಯ 37ನೇ ಕಿ.ಮೀ.ನಿಂದ 16 ಕಿ.ಮೀ. ಉದ್ದದ ಲಿಂಕ್ ನಾಲೆಯನ್ನು ನಿರ್ಮಿಸಿ ಹೆಚ್ಚುವರಿ ನೀರನ್ನು ಕಾವೇರಿ ಶಾಖೆಗೆ ಹಾಯಿಸುವುದು ಮತ್ತು ಕಾವೇರಿ, ಕೆರಗೋಡು, ಮದ್ದೂರು, ಲೋಕಸಾರ, ತುರಗನೂರು ಹಾಗೂ ಹೆಬ್ಬಕವಾಡಿ ಶಾಖೆಗಳನ್ನು ಬಲಪಡಿಸುವುದು.

ಇ) ಹೌದು.

ಈ) ನಾಲೆಗಳ ನವೀಕರಣದ ಪ್ರಸ್ತಾವ ಪರಿಶೀಲನೆಯಲ್ಲಿದೆ.

ಉ) ಜನವರಿ 93ರ ಅಂತ್ಯದವರೆಗೆ 522.20 ಕೋಟಿ ರೂಪಾಯಿಗಳು.